**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು**

ದಿನಾಂಕಃ 08ನೇ ಏಪ್ರಿಲ್ ತಿಂಗಳು 2026 ರಂದು

**ಸಿಸಿ ನಂ.353/2025**

**ಫಿರ್ಯಾದುದಾರರುಃ** ಶಿವಕುಮಾರ, ಬಿನ್ ಚಿಕ್ಕಚನ್ನಪ್ಪ,
36 ವರ್ಷ, ವಾಸಃ ಗುರುಗಳ ಬೀದಿ,
ಹುಣಸೂರು ಟೌನ್, ಮೈಸೂರು ಜಿಲ್ಲೆ.

**– ವಿರುದ್ಧ –**

**ಆರೋಪಿಃ** ಮನುಕುಮಾರ.ಸಿ., ಬಿನ್ ಚಂದ್ರನಾಯಕ,
30 ವರ್ಷ, ವ್ಯವಸಾಯ, ವಾಸಃ ಗುರುಗಳ ಬೀದಿ,
ಕಲ್ಲುಣಿಕೆ, ಹುಣಸೂರು ಟೌನ್, ಮೈಸೂರು ಜಿಲ್ಲೆ.

**ಭಾರತೀಯ ನಾಗರಿಕಾ ಸುರಕ್ಷಾ ಸಂಹಿತೆಯ ಕಲಂ 274 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಆರೋಪಿಯಾದ ನೀವು ಮತ್ತು ಫಿರ್ಯಾದುದಾರರಾದ ಶಿವಕುಮಾರ್ ರವರು ಹಲವಾರು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ನೀವು ದಿನಾಂಕಃ 10.01.2025ರಂದು ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ಮತ್ತು ವ್ಯಾಪಾರದ ಸಲುವಾಗಿ ರೂ.1,75,000/-ಗಳನ್ನು ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ದಿನಾಂಕಃ 05.03.2025 ರಂದು ಪಾವತಿಯಾಗುವಂತೆ ನೀವು ಕೆನರಾ ಬ್ಯಾಂಕ್, ಹುಣಸೂರು ಶಾಖೆಯ ಚೆಕ್ ಸಂಖ್ಯೆಃ 547296 ಅನ್ನು ರೂ.1,75,000/-ಗಳಿಗೆ ಫಿರ್ಯಾದಿದಾರರಿಗೆ ನೀಡಿದ್ದು, ಅದನ್ನು ಅವರು ತಮ್ಮ ಖಾತೆ ಹೊಂದಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಯ ಮೂಲಕ ದಿನಾಂಕಃ 05.03.2025ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 11.03.2025 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ನಿಮಗೆ ದಿನಾಂಕಃ 01.04.2025 ರಂದು ತಮ್ಮ ವಕೀಲರಿಂದ ನೋಂದಾಯಿತ ಅಂಚೆಯ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸನ್ನು ನೀವು ದಿನಾಂಕಃ 02.04.2025 ರಂದು ಸ್ವೀಕರಿಸಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಚೆಕ್‌ನಲ್ಲಿ ನಮೂದಿಸಿದ ಹಣವನ್ನಾಗಲಿ ಮತ್ತು ಪ್ರತ್ಯುತ್ತರವನ್ನಾಗಲೀ ನೀಡದೆ ಇರುವುದರಿಂದ ನೀವು

ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆ:1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿಯಿತು |
| ಪ್ರಶ್ನೆ: 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರ: | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

Sd/-

(ಅನಿತ)

ANITHA Digitally signed by ANITHA Date: 2026.04.08 18:38:42 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿ: